# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No. 1 | Issue : 266 | Pages .02 | Date : 10.09.2025 WEDNESDAY | RNI NO.KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 266 – ಪುಟಗಳು : 02 10.09.2025 ಬುಧವಾರ | Ph : 8762954248 | ದರ : ₹1


## ಪಿಎಂಎಫ್‌ಎಂಇ ನೆರವು ಪಡೆಯಲು ಡಿಸಿ ಸಲಹೆ

### ಸ್ವ ಉದ್ಯಮಿಗಳಿಗೆ ಸಾಲ ಸೌಲಭ್ಯ । ಜಿಲ್ಲಾ ಮಟ್ಟದ ಅರಿವು ಕಾರ್ಯಕ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಆರ್ಥಿಕವಾಗಿ ಸ್ವಾವಲಂಬಿಯಾಗಬೇಕೆಂದರೆ ಸ್ವ ಉದ್ಯೋಗ ಅತ್ಯವಶ್ಯಕವಾಗಿದ್ದು ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣ ಉದ್ದಿಮೆ (ಪಿಎಂಎಫ್‌ಎಂಇ) ವರದಾನವಾಗಲಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಪಿಎಂಎಫ್‌ಎಂಇ ಜಿಲ್ಲಾ ಮಟ್ಟದ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸ್ವಂತ ಉದ್ಯೋಗ ಮಾಡಲು ಇಚ್ಛಿಸುವವರಿಗೆ ಈ ಯೋಜನೆ ಸುವರ್ಣಾವಕಾಶ.

ರೈತರು ಬಿತ್ತನೆ ಮಾಡಿ ಮಾರುಕಟ್ಟೆಗೆ ಬೆಳೆ ನೀಡಿದರೆ ಎಷ್ಟೋ ಬಾರಿ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುವುದಿಲ್ಲ. ಬೆಳೆ ರೋಗ, ನೀರಿನ ಅಭಾವ ಹೀಗೆ ನಾನಾ ಸಮಸ್ಯೆಗಳಿಂದ ರೈತ ಸಂಕಷ್ಟಕ್ಕೆ ಸಿಲುಕುತ್ತಾನೆ.ಅಂತಹ ಸಂದರ್ಭದಲ್ಲಿ ಕಿರು ಉದ್ಯಮಗಳು ಕೈ ಹಿಡಿಯುತ್ತವೆಯೆಂದರು. ಕೃಷಿಯಲ್ಲಿ ಶೇ. 90 ರಷ್ಟು ರೈತ ಮಹಿಳೆಯರೇ ಕೆಲಸ ಮಾಡುವವರಿದ್ದಾರೆ. ಹಾಗಾಗಿ ಮಹಿಳೆಯರು ಈ ಯೋಜನೆಯ ಸದುಪಯೋಗ ಪಡೆಯಬೇಕು.

ಸ್ತ್ರೀ ಶಕ್ತಿ, ಸ್ವ–ಸಹಾಯ ಗುಂಪಿನ ಮಹಿಳೆಯರು ಹೆಚ್ಚಿನ ಮಾಹಿತಿ ತಿಳಿದು ಸದುಪಯೋಗ ಪಡೆದುಕೊಳ್ಳಬೇಕು. ಸಕಲೇಶಪುರ ಭಾಗದಲ್ಲಿ ಕಾಫಿ, ಚನ್ನರಾಯಪಟ್ಟಣ ತಾಲ್ಲೂಕು ಭಾಗದಲ್ಲಿ ತೆಂಗು ಹೀಗೆ ಒಂದೊಂದು ಭಾಗದಲ್ಲಿ ಒಂದೊಂದು ವಿಶೇಷ ಬೆಳೆ ಇದೆ. ಅದನ್ನು ಆಧರಿಸಿ ಸ್ವ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬೇಕೆಂದರು.

ಸಾಮಾನ್ಯ ಮೂಲಸೌಕರ್ಯ ಸೃಷ್ಟಿಗೆ ಶೇ. 35 ರಷ್ಟು ಸಾಲ ಸಂಪರ್ಕಿತ ಸಹಾಯಧನ, 3 ಕೋಟಿ ರೂ.ವರೆಗೆ ಸಹಾಯಧನ ನೀಡಲಾಗುತ್ತಿದೆ. ಅದಕ್ಕೆ ರೈತ ಉತ್ಪಾದಕರ ಸಂಸ್ಥೆಗಳು/ಕಂಪನಿಗಳು, ಸಹಕಾರಿಗಳು, ಸ್ವ–ಸಹಾಯ ಸಂಘಗಳು ಮತ್ತು ಅದರ ಒಕ್ಕೂಟ ಮತ್ತು ಸರ್ಕಾರಿ ಸಂಸ್ಥೆಗಳು ಅರ್ಹ. ಅರ್ಜಿದಾರರ ಸಂಸ್ಥೆಯ ಕನಿಷ್ಠ ವಹಿವಾಟು ಮತ್ತು ಅನುಭವದ ಯಾವುದೇ ಪೂರ್ವ ಷರತ್ತುಗಳಿಲ್ಲ. ವಿಂಗಡಣೆ, ಶ್ರೇಣೀಕರಣ, ಸಂಗ್ರಹಣೆ, ಸಾಮಾನ್ಯ ಸಂಸ್ಕರಣೆ, ಪ್ಯಾಕೇಜಿಂಗ್ ಮತ್ತು ಪ್ರಯೋಗಾಲಯ ಇತ್ಯಾದಿ ಘಟಕ ಸ್ಥಾಪಿಸಲು ಅವಕಾಶವಿದೆ ಎಂದರು.

ಬ್ರಾಂಡಿಂಗ್ ಮತ್ತು ಮಾರುಕಟ್ಟೆ ಚಟುವಟಿಕೆಗಳಾದ ಪ್ಯಾಕೇಜಿಂಗ್, ಜಾಹೀರಾತು, ಸಾಮಾನ್ಯ ಬ್ರಾಂಡ್ ಅಭಿವೃದ್ಧಿ, ಚಿಲ್ಲರೆ ಮಾರಾಟ ಸಂಸ್ಥೆಗಳೊಂದಿಗೆ ಒಡಂಬಡಿಕೆಗಾಗಿ ಶೇ. 50 ರಷ್ಟು ಸಹಾಯಧನ ದೊರೆಯುತ್ತದೆ. ಅದಕ್ಕೆ ರೈತ ಉತ್ಪಾದಕರ ಸಂಸ್ಥೆಗಳು/ಕಂಪನಿಗಳು, ಸಹಕಾರಿ, ಸ್ವ–ಸಹಾಯ ಸಂಘ, ಸಹಕಾರಿ ಸಂಸ್ಥೆ ಮತ್ತು ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ವಿಶೇಷ ಉದ್ದೇಶ ಸಂಸ್ಥೆ ಅರ್ಹ ಸಂಸ್ಥೆಗಳಾಗಿರುತ್ತವೆ ಎಂದು ಹೇಳಿದರು.

ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಯೋಗೇಶ್, ಉದ್ಯಮಿದಾರರು, ರೈತರು ಭಾಗವಹಿಸಿದ್ದರು.




### ಸಾಲ ಸೌಲಭ್ಯ ಸದುಪಯೋಗವಾಗಲಿ:

ಕೆಫೆಕ್ ವ್ಯವಸ್ಥಾಪಕ ನಿರ್ದೇಶಕ ಶಿವಪ್ರಕಾಶ್ ಮಾತನಾಡಿ, ಕಿರು ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಮೂಲಕ ಇತರರಿಗೂ ಮಾದರಿಯಾಗಬೇಕು. ಒಂದು ಘಟಕ ಸ್ಥಾಪನೆ ಮಾಡಿದರೆ 10 ಜನರಿಗೆ ಉದ್ಯೋಗ ಸೃಷ್ಟಿ ಆಗುತ್ತದೆ. ಜೊತೆಗೆ ಸ್ಥಳೀಯ ರೈತರಿಗೆ ಮೌಲ್ಯವರ್ಧನೆ ದೊರೆಯುತ್ತದೆ ಎಂದು ತಿಳಿಸಿದರು.

ಒಬ್ಬರು ರೈತ 5 ಜನರಿಗೆ ಯೋಜನೆಯ ಕುರಿತಾಗಿ ಮಾಹಿತಿ ನೀಡಿದರೆ ಬಹಳ ಸದುಪಯೋಗವಾಗುತ್ತದೆ. ಆಹಾರವನ್ನು ಸಂಸ್ಕರಣೆ ಮಾಡಿ ಮಾರಾಟ ಮಾಡುತ್ತಾರೋ ಅಂತಹವರಿಗೆ ಪ್ರೋತಾಹ ನೀಡಬೇಕು. ಸಬ್ಸಿಡಿ ಆಧಾರಿತ ಸಾಲ ಯೋಜನೆಯ ಸದುಪಯೋಗ ಪಡೆದುಕೊಳ್ಳಿ ಎಂದರು.

### 15 ಲಕ್ಷ ರೂ. ಸಹಾಯಧನ

ರೈತರು ಕಿರು ಉದ್ಯಮ ಮಾಡಲು ಕೇಂದ್ರ ಸರ್ಕಾರ 6 ಲಕ್ಷ ರೂ. ಹಾಗೂ ರಾಜ್ಯ ಸರ್ಕಾರದಿಂದ 9 ಲಕ್ಷ ರೂ. ಸೇರಿ 15 ಲಕ್ಷ ರೂ. ಸಹಾಯಧನ ನೀಡಲಾಗುತ್ತಿದೆ. ಈ ಉದ್ಯಮದ ಕುರಿತು ರೈತರಿಗೆ ಗೊಂದಲಗಳಿದ್ದಲ್ಲಿ ಕೃಷಿ ಅಧಿಕಾರಿಗಳನ್ನು ಭೇಟಿಯಾಗಿ ಬಗೆಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

### 3 ಕೋಟಿ ರೂ. ವರೆಗೆ ಸಹಾಯಧನ:

ಜಂಟಿ ಕೃಷಿ ನಿರ್ದೇಶಕ ಪಿ. ರಮೇಶ್‌ಕುಮಾರ್ ಮಾತನಾಡಿ, ಆಹಾರ ಸಂಸ್ಕರಣಾ ಚಟುವಟಿಕೆಗಳಲ್ಲಿ ತೊಡಗಿರುವ ಸ್ವ–ಸಹಾಯ ಸಂಘಗಳ ಸದಸ್ಯರಿಗೆ ದುಡಿಯುವ ಬಂಡವಾಳ ಮತ್ತು ಸಣ್ಣ ಉಪಕರಣಗಳ ಖರೀದಿಗಾಗಿ ಪ್ರತಿ ಸದಸ್ಯರಿಗೆ 40 ಸಾವಿರ ರೂ. ಕಡಿಮೆ ಬಡ್ಡಿ ದರದ ಸಾಲದ ಜೊತೆಗೆ ಪ್ರತಿ ಸ್ವ–ಸಹಾಯ ಸಂಘಕ್ಕೆ 4 ಲಕ್ಷ ರೂ. ಪಡೆಯಲು ಅವಕಾಶವಿದೆಯೆಂದು ತಿಳಿಸಿದರು.

## ಸಮಾಜಕ್ಕೆ ಗುರುಗಳ ಮಹತ್ವ ಮರೆಯಬೇಡಿ

### ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು

ಹಾಸನ: ಸಮಾಜಕ್ಕೆ ಗುರುಗಳ ಕೊಡುಗೆಯ ಮಹತ್ವವನ್ನು ಅರಿತುಕೊಂಡರೇ ಅಂತಹ ವ್ಯಕ್ತಿಯ ಭವಿಷ್ಯ ಉಜ್ವಲವಾಗಿರುತ್ತದೆ ಎಂದು ಹಳೇಬೀಡು ಪುಷ್ಪಗಿರಿ ಶ್ರೀ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ತಿಳಿಸಿದರು.

ನಗರದ ಶ್ರೀ ಕ್ಷೇತ್ರ ತಣ್ಣೀರು ಹಳ್ಳದ ಮಠದ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ದಿವ್ಯಸಾನಿಧ್ಯವಹಿಸಿ ಗುರುಗಳಿಂದ ಸಮಾಜಕ್ಕೆ ಕೊಡುಗೆ ಏನು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿ, ಗುರುಗಳ ಸೇವೆ, ತ್ಯಾಗ ಮತ್ತು ಸಮಾಜ ನಿರ್ಮಾಣದಲ್ಲಿ ಅವರ ಪಾತ್ರ ಕುರಿತು ಮಾರ್ಮಿಕವಾಗಿ ಮಾತನಾಡಿದರು. ಅವರು ಗುರುಗಳ ಕೊಡುಗೆ ಸದಾ ಅಮೂಲ್ಯವಾಗಿದ್ದು, ಸಮಾಜದ ನವೀನ ಪೀಳಿಗೆಯನ್ನು ರೂಪಿಸುವ ಶಕ್ತಿ ಗುರುಗಳಲ್ಲಿ ಅಡಕವಾಗಿದೆ ಎಂದು ನೆನಪಿಸಿದರು. ಮಹಾಸಭಾ ವತಿಯಿಂದ ನಡೆಯುತ್ತಿರುವ ಎಲ್ಲ ಕಾರ್ಯಕ್ರಮಗಳ ಬಗ್ಗೆ ಮತ್ತು ಎಲ್ಲರೂ ಆಸಕ್ತಿಯಿಂದ ವಿನೂತನ ಕಾರ್ಯಕ್ರಮಗಳನ್ನು ಆಚರಿಸುತ್ತಿರುವುದರ ಬಗ್ಗೆ ಪ್ರಶಂಸೆಯನ್ನು ಸಹ ವ್ಯಕ್ತಪಡಿಸಿದರು. 2025 ಸೆಪ್ಟಂಬರ್ 21 ರಂದು ಭಾನುವಾರ ನಡೆಯುವ ಬಸವ ಸಂಸ್ಕೃತಿ ಅಭಿಯಾನವೂ ಜಿಲ್ಲೆಯಲ್ಲಿ ವಿಶೇಷವಾಗಿ ವಿನೂತನವಾಗಿ ಆಚರಿಸುವುದರ ಬಗ್ಗೆ ಜಿಲ್ಲೆಯ ಸಮಸ್ತ ಜನರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕರೆಯನ್ನು ಸಹ ನೀಡಿದರು ಮತ್ತು ಎಲ್ಲರಿಗೂ ಆಶೀರ್ವಚನ ನೀಡಿದರು

ಈ ಕಾರ್ಯಕ್ರಮದಲ್ಲಿ ಅನೇಕ ಗಣ್ಯ ಶಿಕ್ಷಕರನ್ನು ಮಹಾಸಭೆಯ ವತಿಯಿಂದ ಶ್ರೀಮತಿ ಜಯಶೀಲಮ್ಮ (ಕಾಲೇಜು ಪ್ರಾಂಶುಪಾಲರ ಸಂಘದ ಅಧ್ಯಕ್ಷೆ, ಹಳೆಕೋಟೆ ಸರ್ಕಾರಿ ಪಿಯು ಕಾಲೇಜು ಪ್ರಾಂಶುಪಾಲೆ), ಶ್ರೀಮತಿ ರಾಣಿ ವಿ.ಎಸ್. (ಭಾರತ ಸೇವಾದಳದ ವಲಯ ಸಂಘಟಕಿ), ಬಸವರಾಜ್ ಯು.ಎಸ್. (ನಿವೃತ್ತ ಶಿಕ್ಷಕ), ಸೋಮಶೇಖರ್ (ಯುನೈಟೆಡ್ ಶಾಲೆ)

ಮಲ್ಲಿಕಾರ್ಜುನ್ (ತಣ್ಣೀರುಳ್ಳ ಮಠದ ಸಿದ್ದೇಶ್ವರ ಶಾಲೆಯ ಮುಖ್ಯ ಶಿಕ್ಷಕ), ಶ್ರೀಮತಿ ರಾಧಿಕಾ, ಶ್ರೀಮತಿ ಗೌರಿ, ಶ್ರೀಮತಿ ಅನುಸೂಯಾ (ತಾಲೂಕು ಘಟಕದ ಸದಸ್ಯರು) ಇವರನ್ನು ಸನ್ಮಾನಿಸಿ ಗೌರವಿಸಿದರು. ಸಮಾರಂಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಜಿಲ್ಲಾ ಘಟಕ, ಮಹಿಳಾ ಘಟಕ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು ಮತ್ತು ಹಿರಿಯ ಸದಸ್ಯರು ಭಾಗವಹಿಸಿದರು. ತಾಲೂಕು ಘಟಕದ ಮಹಿಳಾ ಸದಸ್ಯರು ಪ್ರಾರ್ಥನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸ್ವಾಗತವನ್ನು ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಚಂದ್ರಮತಿ ಅವರು ನಡೆಸಿಕೊಟ್ಟರು. ಜಿಲ್ಲಾ ಘಟಕದ ಅಧ್ಯಕ್ಷರಾದ ನವಿಲೇ ಪರಮೇಶ್ ಅವರು ಪ್ರಸ್ತಾವನೆಯನ್ನು ಮಂಡಿಸಿ, ಅಧ್ಯಕ್ಷರ ನುಡಿಯನ್ನು ಸಹ ನೀಡಿದರು.

ಅಖಿಲ ಭಾರತ ವೀರಶೈವ ಜಿಲ್ಲಾ ಘಟಕದ ಅಧ್ಯಕ್ಷರಾದ ನವಿಲೇ ಪರಮೇಶ್ ಹಾಗೂ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಚಂದ್ರಮತಿ ಅವರು ಶಿಕ್ಷಕರಿಗೆ ಗೌರವ ಸಲ್ಲಿಸಿ ಅಭಿನಂದಿಸಿದರು. ತಾಲೂಕು ಘಟಕದ ಅಧ್ಯಕ್ಷರಾದ ಶ್ರೀಮತಿ ಮಮತಾ ಪಾಟೀಲ್ ಅವರು ಕೇಕ್ ಕತ್ತರಿಸಿ ಸಿಹಿ ವಿತರಣೆ ಮಾಡುವ ಮೂಲಕ ಸಮಾರಂಭವನ್ನು ಹರ್ಷಭರಿತಗೊಳಿಸಿದರು.



## ರೈಲ್ವೆ ಕಾಮಗಾರಿಯಿಂದ ಸ್ಥಳೀಯರಿಗೆ ತೊಂದರೆ

### ಶಾಸಕ ಹೆಚ್.ಪಿ. ಸ್ವರೂಪ್ ತುರ್ತು ಪರಿಶೀಲನೆ, ಸೂಚನೆ



ಹಾಸನ: ರೈಲ್ವೆ ಇಲಾಖೆಯ ರಾಜಘಟ್ಟ ಸಮೀಪದ ಲೋಡಿಂಗ್ ಲಾರಿಗಳಿಗೆ ಶೀಟ್ ಅಳವಡಿಸುವ ಕಾಮಗಾರಿಯಿಂದ ಸ್ಥಳೀಯರಿಗೆ ಅಪಾರ ತೊಂದರೆ ಉಂಟಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಕ್ಷೇತ್ರದ ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್ ಮಂಗಳವಾರದಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಚನೆ ನೀಡಿದರು.

ಸ್ಥಳೀಯರ ಪ್ರಕಾರ, ರೈಲ್ವೆ ಕಾಮಗಾರಿಯಿಂದ ಸುತ್ತಮುತ್ತಲಿನ ಎಂಟು ಹಳ್ಳಿಗಳ ಜನತೆಗೆ ತೊಂದರೆ ಉಂಟಾಗಿದೆ. ಕೈಗಾರಿಕಾ ಪ್ರದೇಶಕ್ಕೆ ತೆರಳುವ ಕಾರ್ಮಿಕರು, ನಗರ ಪ್ರದೇಶ ಮತ್ತು ಬೈಪಾಸ್ ರಸ್ತೆಯಿಂದ ಸಂಚಾರ ನಡೆಸುವ ವಾಹನ ಸವಾರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದಿನನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ. ಸ್ಥಳದಲ್ಲಿಯೇ ಜನರ ಅಹವಾಲುಗಳನ್ನು ಆಲಿಸಿದ ಶಾಸಕ ಸ್ವರೂಪ್, ತಕ್ಷಣ ಅಧಿಕಾರಿಗಳೊಂದಿಗೆ ಚರ್ಚಿಸಿ ಜನರ ಪರವಾಗಿ ಕಟುವಾಗಿ ಮಾತಾಡಿ, ಕಾಮಗಾರಿ ತಕ್ಷಣ ನಿಲ್ಲಿಸಬೇಕು ಎಂದು ಸೂಚಿಸಿದರು. ಇದಲ್ಲದೆ, "ಈ ಸಮಸ್ಯೆಯನ್ನು ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಅವರ ಗಮನಕ್ಕೆ ತಂದು ನಿಯೋಗದ ಮೂಲಕ ಮನವಿ ಸಲ್ಲಿಸಲಾಗುವುದು. ಅದುವರೆಗೆ ಯಾವುದೇ ರೀತಿಯ ಕಾಮಗಾರಿ ಮುಂದುವರಿಯಬಾರದು" ಎಂದು ಶಾಸಕರು ಸ್ಪಷ್ಟ ಸೂಚನೆ ನೀಡಿದರು. ಈ ಬಗ್ಗೆ ಕೇಂದ್ರ ರೈಲ್ವೆ ಸಚಿವರಾದಂತಹ ಶ್ರೀ ವಿ.ಸೋಮಣ್ಣ ಅವರ ಬಳಿ ನಿಯೋಗ ತೆರಳಿ ಮನವಿ ಸಲ್ಲಿಸಲಾಗುವುದು ಅಲ್ಲಿಯ ವರೆಗೆ ಯಾವುದೇ ಕಾಮಗಾರಿ ಮಾಡಕೂಡದು ಎಂದು ಸೂಚಿಸಿದರು.

## ಪತ್ರಿಕಾ ಸಂಪಾದಕ ವೆಂಕಟೇಶ್‌ಗೆ ಮತ್ತೊಂದು ಪ್ರಶಸ್ತಿಯ ಗರಿ



ಹಾಸನ : ಉದಯ ವರದಿ ಪತ್ರಿಕೆ ಸಂಪಾದಕ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ದತ್ತಿ ಪ್ರಶಸ್ತಿ ಪುರಸ್ಕೃತ ವೆಂಕಟೇಶ್ ಅವರು ಮತ್ತೊಂದು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಬೆಂಗಳೂರಿನ ಅನ್ವೇಷಣಾ ಸಾಂಸ್ಕೃತಿಕ ಅಕಾಡೆಮಿಯು ಈ ಪ್ರಶಸ್ತಿಯನ್ನು ಪ್ರಕಟಿಸಿದ್ದು, ಸಂಪಾದಕ ವೆಂಕಟೇಶ್ ಅವರು ಸಂಪಾದಕ ರತ್ನ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕಳೆದ 30 ವರ್ಷಗಳಿಂದ ಇವರು ವಿವಿಧ ಪತ್ರಿಕೆಗಳಲ್ಲಿ ವರದಿಗಾರರಾಗಿ, ದೃಶ್ಯಮಾಧ್ಯಮದ ವರದಿಗಾರರಾಗಿ ಕಾರ್ಯ ನಿರ್ವಹಿಸಿದ್ದು, ಕಳೆದ ಐದು ವರ್ಷಗಳಿಂದ ಉದಯ ವರದಿ ಪತ್ರಿಕೆಯ ಸಂಪಾದಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ ಎಂದು ಅನ್ವೇಷಣಾ ಸಾಂಸ್ಕೃತಿಕ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಸನ್ನ ಕುಮಾರ್ ಅಂತರಾಷ್ಟ್ರೀಯ ತೀರ್ಪುಗಾರರಾಗಿ ಆಯ್ಕೆ




ಹಾಸನ: ಜಿಲ್ಲೆಯ ಹೆಮ್ಮೆಯ ಸಾಧನೆ ಮಾಡಿದ ಹಾಸನ ಜಿಲ್ಲಾ ಅಮೆಚೂರ್ ಅಥ್ಲೆಟಿಕ್ ಸಂಸ್ಥೆಯ ಸಹಾಯಕ ಕಾರ್ಯದರ್ಶಿ ಹಾಗೂ ಅಥ್ಲೆಟಿಕ್ಸ್ ತರಬೇತಿದಾರರಾದ ಎಸ್.ಎಲ್. ಪ್ರಸನ್ನ ಕುಮಾರ್ ಅವರು ಈಗ ಅಂತಾರಾಷ್ಟ್ರೀಯ ಮಟ್ಟದ ಮಹತ್ವದ ಕ್ರೀಡಾಕೂಟದಲ್ಲಿ ತೀರ್ಪುಗಾರರಾಗಿ ಹಾಸನದಿಂದ ಏಕೈಕ ವ್ಯಕ್ತಿ ಆಯ್ಕೆಯಾಗಿದ್ದಾರೆ.

2025ರ ಸೆಪ್ಟೆಂಬರ್ 25ರಿಂದ ಅಕ್ಟೋಬರ್ 5ರವರೆಗೆ ನವದೆಹಲಿ ನಗರವು ವಿಶ್ವದ ಗಮನ ಸೆಳೆಯಲಿದೆ. ಏಕೆಂದರೆ ಒಲಂಪಿಕ್‌ಗಿಂತ ಮುಂದಿನ ದೊಡ್ಡದಾದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಇದೇ ಮೊದಲ ಬಾರಿಗೆ ಭಾರತದಲ್ಲಿ ನಡೆಯುತ್ತಿದೆ. ಪ್ಯಾರಾ ಕಮಿಟಿ ಆಫ್ ಇಂಡಿಯಾ ಆಯೋಜಿಸುತ್ತಿರುವ ಈ ಕ್ರೀಡಾಕೂಟದಲ್ಲಿ 110 ದೇಶಗಳ 1700ಕ್ಕೂ ಹೆಚ್ಚು ಅಂತರಾಷ್ಟ್ರೀಯ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಈ ಪ್ರತಿಷ್ಠಿತ ಸ್ಪರ್ಧೆಯಲ್ಲಿ ಹಾಸನದ ಪ್ರಸನ್ನ ಕುಮಾರ್ ಎಸ್.ಎಲ್ ಅವರು ಅಂತರಾಷ್ಟ್ರೀಯ ತೀರ್ಪುಗಾರರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹಾಸನದಿಂದ ಏಕೈಕ ಪ್ರತಿನಿಧಿಯಾಗಿದ್ದಾರೆ.

ಹಾಸನ ಜಿಲ್ಲಾ ಅಮೆಚೂರ್ ಅಥ್ಲೆಟಿಕ್ ಸಂಸ್ಥೆಯ ಅಧ್ಯಕ್ಷರು, ಸದಸ್ಯರು, ಜಿಲ್ಲಾ ಕ್ರೀಡಾಂಗಣದ ತರಬೇತಿದಾರರು, ಕ್ರೀಡಾಪಟುಗಳು, ಹಾಸನ ಜಿಲ್ಲೆಯ ಕ್ರೀಡಾ ಪ್ರೇಮಿಗಳು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರತಿನಿಧಿಗಳು ಪ್ರಸನ್ನ ಕುಮಾರ್ ಅವರ ಸಾಧನೆಗೆ ಹರ್ಷ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿ ಒಲಂಪಿಕ್ ಕ್ರೀಡಾಕೂಟದಲ್ಲೂ ತೀರ್ಪುಗಾರರಾಗಿ ಆಯ್ಕೆಯಾಗಲಿ ಎಂದು ಶುಭ ಹಾರೈಸಿದ್ದಾರೆ.

## ಹಾಸನದಲ್ಲಿ ಸೆ. 12ಕ್ಕೆ ಜೀ ಕನ್ನಡ ಆಡಿಷನ್




ಹಾಸನ: ಕನ್ನಡದ ಜನಪ್ರಿಯ ಸುದ್ದಿ ವಾಹಿನಿ ಜೀ ಕನ್ನಡದ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್, ಕಾಮಿಡಿ ಕಿಲಾಡಿಗಳು ಶೋಗೆ ಕಲಾವಿದರ ಆಯ್ಕೆಗಾಗಿ ಸೆ. 12ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ನಗರದ ಎಸ್‌ಆರ್‌ಎಸ್ ಪ್ರಜ್ಞಾ ವಿದ್ಯಾಶಾಲೆಯಲ್ಲಿ ಆಡಿಷನ್ ನಡೆಯಲಿದೆ.

ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಕಾರ್ಯಕ್ರಮಕ್ಕೆ ಆಸಕ್ತರು ಉತ್ತಮ ನೃತ್ಯ ಪಟುವಾಗಿರಬೇಕು. ಕಾಮಿಡಿ ಕಿಲಾಡಿಗಳಲ್ಲಿ ಭಾಗವಹಿಸುವುದಾದರೆ ಸ್ವರಚಿತ ಕಾಮಿಡಿ ಸ್ಕಿಟ್ ಇರಬೇಕು. ರೀಲ್ಸ್ ವಿಡಿಯೋಗಳಿಗೆ ಅವಕಾಶವಿಲ್ಲ. ಆಸಕ್ತರು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ವಿಳಾಸದ ಜೆರಾಕ್ಸ್ ಪ್ರತಿ ತರುವುದು ಕಡ್ಡಾಯ. ಆಡಿಷನ್‌ಗೆ ಯಾವುದೇ ಶುಲ್ಕ ನಿಗದಿಪಡಿಸಿಲ್ಲ.

## ಜಗದ ನೋವಿಗೆ ಕಿವಿಗೊಡುವವನೇ ನಿಜವಾದ ಸಾಹಿತಿ

### ಮನೆಮನೆ ಕವಿಗೋಷ್ಠಿಯಲ್ಲಿ ಗೊರೂರು ಶಿವೇಶ್ ಅಭಿಪ್ರಾಯ

ಹಾಸನ: ಸಾಹಿತ್ಯವು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಅದು ಜಗದ ನೋವಿಗೆ ಕಿವಿಗೊಟ್ಟು, ಸಮಾಜದ ಕಣ್ಣೀರನ್ನು ಒರೆಸುವ ಶಕ್ತಿಯಾಗಿದೆ. ನೋವಿಗೆ ಸ್ಪಂದಿಸುವವನೇ ನಿಜವಾದ ಸಾಹಿತಿ ಎಂದು ಲೇಖಕ ಗೊರೂರು ಶಿವೇಶ್ ಅಭಿಪ್ರಾಯಪಟ್ಟರು.

ನಗರದ ಕುವೆಂಪು ನಗರದಲ್ಲಿರುವ ಶ್ರೀಮತಿ ಹೇಮಾ ಅನಂತರವರ ರೆಡ್‌ರೋಜ್ ನಿವಾಸದಲ್ಲಿ ನಡೆದ 333ನೇ ಮನೆಮನೆ ಕವಿಗೋಷ್ಠಿಯಲ್ಲಿ ಲೇಖಕಿ ಸ.ವೆಂ. ಪೂರ್ಣಿಮಾರವರ ಒಂದೆಲ ಮೇಲಿನ ಕಾಡು" ಕೃತಿಯನ್ನು ವಿಮರ್ಶೆ ಮಾಡುತ್ತಾ, ಸಾಹಿತ್ಯದಲ್ಲಿ ಸಂತೋಷಕ್ಕೆ ಒಂದೇ ಮುಖವಿದ್ದರೆ, ದುಃಖಕ್ಕೆ ಸಾವಿರಾರು ಮುಖಗಳಿವೆ. ಆದರೆ ಆ ನೋವಿನ ಹೂರಣಕ್ಕೆ ನಲಿವಿನ ಹೊದಿಕೆಯನ್ನು ನೀಡುವ ಪ್ರಕಾರವೇ ಲಲಿತ ಪ್ರಬಂಧ. ಪೂರ್ಣಿಮಾರವರ ಈ ಸಂಕಲನ ಒಂದು ಎಲೆಗೂ ತನ್ನದೇ ಆದ ಕಥೆ ಇರುವುದು ಎಂಬುದನ್ನು ನೆನಪಿಸುವಂತೆ,

ಓದುಗರ ಮನಸ್ಸಿನ ಪರದೆಯ ಮೇಲೆ ಜೀವಂತ ಚಿತ್ರಗಳನ್ನು ಮೂಡಿಸುತ್ತದೆ ಎಂದರು. ಹಿರಿಯ ಸಾಹಿತಿಗಳಾದ ಚಂದ್ರಕಾಂತ ಪಡೆಸೂರ್ ಹಾಗೂ ಚೆನ್ನೇಗೌಡ ಅವರು ಕಳೆದ 25 ವರ್ಷಗಳಿಂದ ಮನೆಮನೆ ಕವಿಗೋಷ್ಠಿ ನಿರಂತರವಾಗಿ ಸಾಗುತ್ತಿರುವುದನ್ನು ಶ್ಲಾಘಿಸಿದರು.

ಸಂಚಾಲಕಿ ಸುಕನ್ಯಾ ಮುಕುಂದ ಅವರು ಮಾತನಾಡಿ, ಭವಿಷ್ಯದಲ್ಲಿ ಕವಿಗೋಷ್ಠಿಯ ಮೂಲಕ ಕವನ ಸಂಕಲನ ಹೊರತರಲು, ಮುಂದಿನ ಕಾರ್ಯಕ್ರಮಗಳ ರೂಪುರೇಷೆ ಹಾಕುವುದಾಗಿ ತಿಳಿಸಿದರು.

ಈ ಕವಿಗೋಷ್ಠಿಯಲ್ಲಿ ಅನೇಕ ಕವಿಗಳು ತಮ್ಮ ಕಾವ್ಯವನ್ನು ವಾಚಿಸಿದರು. ವಾಚಿಸಲಾದ ಕವನಗಳಿಗೆ ಹಿರಿಯ ಸಾಹಿತಿಗಳಾದ ಚಂದ್ರಕಾಂತ ಪಡೆಸೂರ್, ಎಲ್. ಎನ್. ಚನ್ನೇಗೌಡ, ಸುಂದರೇಶ್ ಡಿ. ಉಡುವಾರೆ ಉತ್ತಮ ವಿಮರ್ಶೆ ನೀಡಿ ಕವಿಗಳಿಗೆ ಪ್ರೋತ್ಸಾಹ ನೀಡಿದರು. ಪ್ರಾಯೋಜಕತ್ವ ವಹಿಸಿಕೊಂಡ ಸ.ವೆಂ. ಪೂರ್ಣಿಮಾರವರು ತಮ್ಮ ಕೃತಿಯನ್ನು ಮನೆಮನೆ ಕವಿಗೋಷ್ಠಿಯಲ್ಲಿ ವಿಮರ್ಶೆ ಮಾಡಿದ್ದರಿಂದ ಸಂತೋಷ ವ್ಯಕ್ತಪಡಿಸಿ, ತಮ್ಮ ಬರವಣಿಗೆಗೆ ಪ್ರೋತ್ಸಾಹ ನೀಡಿದವರಿಗೆ ಧನ್ಯವಾದ ಅರ್ಪಿಸಿದರು.

ಸಾವಯುವ ಕೃಷಿಯಲ್ಲಿ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ಪಡೆದ ರೈತ ಮಹಿಳೆ ಹೇಮಾ ಅನಂತ ತಮ್ಮ ನಿವಾಸದಲ್ಲಿ ಕವಿಗೋಷ್ಠಿ ನಡೆದಿರುವುದು ನನ್ನ ಭಾಗ್ಯವೆಂದು ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ರುದ್ರಪ್ಪಾಜಿ, ಮುಕುಂದ ಎಂ., ಮಹೇಶ್ ಎಚ್. ಆರ್., ಅನಂತ ರಾಜ್, ಚಿರಂತ್ ಆರ್. ಉಪಸ್ಥಿತರಿದ್ದರು.

ಗಿರಿಜಾ ನಿರ್ವಾಣಿ ಕಾರ್ಯಕ್ರಮವನ್ನು ನಿರೂಪಿಸಿದರು, ವಾಣಿ ಮಹೇಶ್ ಸ್ವಾಗತಿಸಿದರು ಹಾಗೂ ಜಯಶಂಕರ ಬೆಳಗುಂಬ ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮವನ್ನು ಡಿವಿಜಿಯವರ "ಮಂಕುತಿಮ್ಮನ ಕಗ್ಗ"ಗಳ ಕಾವ್ಯವಾಚನದ ಮೂಲಕ ದಿಬ್ಬೂರು ರಮೇಶ್ ಕಾವ್ಯಾತ್ಮಕವಾಗಿ ಉದ್ಘಾಟಿಸಿದರು.

ಈ ಹಿಂದೆ ಮನೆಮನೆ ಕವಿಗೋಷ್ಠಿಗೆ ಸಂಚಾಲಕಿಯಾಗಿ ಸೇವೆ ಸಲ್ಲಿಸಿದ್ದ ಶ್ರೀಮತಿ ಸಕಿನಾ ಬೇಗಂ ಅವರ ನಿಧನಕ್ಕೆ ಸಂತಾಪ ಸೂಚಿಸಿ ಮೌನಾಚರಣೆಯನ್ನೂ ಕೈಗೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ದಿಬ್ಬೂರು ರಮೇಶ್, ಎನ್.ಎಲ್. ಚನ್ನೇಗೌಡ, ರೇಖಾ ಪ್ರಕಾಶ್, ಎಚ್.ಎನ್. ಭಾರತಿ, ಸೌಮ್ಯ ಪ್ರಸಾದ್, ನಾಗೇಂದ್ರ ಪ್ರಸಾದ್ ಕೆ.ವಿ., ಲಲಿತಾ ಎಸ್., ಜಯಾ ರಮೇಶ್, ಸುಂದರೇಶ್ ಡಿ. ಉಡುವಾರೆ, ಜೆ.ಆರ್. ರವಿಕುಮಾರ್ ಜನಿವಾರ, ಚಲಂ ಹಾಡ್ಲಹಳ್ಳಿ, ಬಿ.ಎಂ. ಭಾರತಿ ಹಾದಿಗೆ, ಡಾ. ಶಾಂತ ಅತ್ನಿ, ಸಿ.ಎಸ್. ತಿಮ್ಮೇಗೌಡ, ಗಿರಿಜಾ ನಿರ್ವಾಣಿ, ಚಿದಾನಂದ ಕೆ.ಎನ್., ಭವ್ಯ ನವೀನ್, ಜಿ.ಎಸ್. ಕಲಾವತಿ ಮಧುಸೂದನ್ ಇತರರು ಉಪಸ್ಥಿತರಿದ್ದರು.




## ಹಾಸನ ಗೃಹ ನಿರ್ಮಾಣ ಸಹಕಾರ ಸಂಘದಿಂದ ತೇಜೋದಯ ವೃದ್ಧಾಶ್ರಮಕ್ಕೆ ನೆರವು

ಹಾಸನ ಜಿಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗೂ ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ತೇಜೋದಯ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಹಿರಿಯ ಜೀವಿಗಳಿಗೆ ಬೆಂಬಲ ಒದಗಿಸಲಾಯಿತು.

ಸಂಘದ ಅಧ್ಯಕ್ಷ ಕೆ.ಎಂ. ಶ್ರೀನಿವಾಸ್ ಅವರ ನೇತೃತ್ವದಲ್ಲಿ ಪದಾಧಿಕಾರಿಗಳು ಆಶ್ರಮಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ ನಿಸ್ವಾರ್ಥ ಸೇವೆಯನ್ನು ಮೆಚ್ಚಿದರು. ಆಶ್ರಮದ ನಿರ್ವಾಹಕರಾದ ಶ್ರೀ ತೇಜ ಅವರನ್ನು ಅಭಿನಂದಿಸಿ, ಸಂಘದ ಪರವಾಗಿ ಕೈಲಾದ ಸಹಾಯವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಆಶ್ರಮದ ಹಿರಿಯ ಜೀವಿಗಳಿಗೆ ಹಣ್ಣು, ಹಂಪಲು ಮತ್ತು ಊಟದ ವ್ಯವಸ್ಥೆ ಮಾಡಲಾಯಿತು.ಇದೆ ವೇಳೆ ಅಧ್ಯಕ್ಷರು ಮಾತನಾಡಿ, ನಮ್ಮ ಸಂಘದ ನಿರ್ದೇಶಕರು ಭವಿಷ್ಯದಲ್ಲಿಯೂ ತಮ್ಮ ಕೈಲಾದಷ್ಟು ಸಹಾಯ ಮುಂದುವರಿಸಬೇಕು ಎಂದು ಕೋರಿದರು. ಇತ್ತೀಚಿನ ಸ್ವಾರ್ಥಪರ ಸಮಾಜದಲ್ಲಿ, ಸ್ವಾರ್ಥರಹಿತವಾಗಿ ಸೇವೆ ಸಲ್ಲಿಸುತ್ತಿರುವ ತೇಜ ಅವರ ನಿಸ್ವಾರ್ಥ ಮನೋಭಾವವನ್ನು ಶ್ಲಾಘಿಸಿ ಗೌರವಿಸಲಾಯಿತು. ಅಶ್ರಮಕ್ಕೆ ಹೊಸ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ, ಸಂಘದ ವತಿಯಿಂದ ರೂ.25,000 ಸಹಾಯಧನವನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಸಂಘದ ಗೌರವ ಕಾರ್ಯದರ್ಶಿ ಸತೀಶ್, ನಿರ್ದೇಶಕರಾದ ಸಾವಿತ್ರಮ್ಮ, ದಾಕ್ಷಾಯಿಣಿ, ವರುಣ್ ಕುಮಾರ್, ಸುರೇಶ್, ಕಾರ್ಯದರ್ಶಿ ಪ್ರವೀಣ್, ಹಾಗೂ ಕೋಆಪರೇಟಿವ್ ಸೊಸೈಟಿಯ ಅಧ್ಯಕ್ಷ ಪರಮೇಶ್ ಎಂ.ಎನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ನೆಮ್ಮದಿ ಬದುಕಿಗೆ ಭಗವಂತನ ಸ್ಮರಣೆ ಅವಶ್ಯಕ

## ಆದಿಚುಂಚನಗಿರಿ ಹಾಸನ ಶಾಖಾ ಮಠದ ಶಂಭುನಾಥ ಶ್ರೀ – ತಿಂಗಳ ಹುಣ್ಣಿಮೆ ಕಾರ್ಯಕ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಕತ್ತಲೆಯಿಂದ ಬೆಳಕಿನೆಡೆಗೆ ಸಾಗಬೇಕೆಂದರೆ ಭಗವಂತನ ಸರಣೆ ಮಾಡಬೇಕು. ಅದರಿಂದ ನೆಮದಿ ಬದುಕು ಪ್ರಾಪ್ತ ವಾಗುತ್ತದೆಂದು ಆದಿಚುಂಚನಗಿರಿ ಹಾಸನ ಹಾಗು ಕೊಡಗು ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಚಿಲುಮೆ ಮಠದ ಶ್ರೀ ಗುರು ವಿಜಯ ಸಿದ್ಧ ಶಿವದೇವ ಮಂಗಳ ಮಂದಿರದಲ್ಲಿ ನಡೆದ 132ನೇ ಗುರು ತೋರಿದ ದಾರಿ –ತಿಂಗಳ ಮಾಮನ ತೇರು ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, 132ನೇ ತಿಂಗಳ ಮಾಮನ ತೇರು ಸಮಾರಂಭ ವಿಶೇಷವಾಗಿದೆ. ಇದು ಎಂದಿಗೂ ಅಂತಿಮವಾದುದಲ್ಲ. ಸದಾ ಮುಂದುವರಿಯುವ ಗುರು ತೋರಿದ ದಾರಿಯಾಗಿದೆ. ಜೀವನದಲ್ಲಿ ಬೆಳಕನ್ನು ಕಾಣಬೇಕಾದರೆ ಭಗವಂತನ ಸರಿಸಬೇಕು. ಆದರೆ ನಾವು ಅಜ್ಞಾನದಿಂದ ಬದುಕಿನಲ್ಲಿ ಜ್ಞಾನದ ಬೆಳಕನ್ನು ಕಂಡುಕೊಳ್ಳದೇ ಅಂಧಕಾರದಲ್ಲಿ ಮುಳುಗಿದ್ದೇವೆ. ಜೀವನದಲ್ಲಿ ದೀರ್ಘಕಾಲ ಬಾಳುವುದನ್ನು ಎಲ್ಲರೂ ಕಲಿಯಬೇಕೆಂದು ಸಲಹೆ ನೀಡಿದರು.



### ಕುವೆಂಪು ಭವನ ಪೂರ್ಣಗೊಳಿಸಲು ಮನವಿ

ಶಾಸಕ ಎ.ಮಂಜು ಅವರು ಮಾತನಾಡಿ, ತಾಂತ್ರಿಕ ಕಾರಣದಿಂದ ಅಪೂರ್ಣಗೊಂಡಿರುವ ಕುವೆಂಪು ಭವನ ಕಾಮಗಾರಿಯನ್ನು ಆದಿಚುಂಚನಗಿರಿ ಮಠಕ್ಕೆ ವಹಿಸಲಾಗಿದ್ದು, ಕೂಡಲೇ ಉಳಿಕೆ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಪಟ್ಟಣದ ಬೈಪಾಸ್ ರಸ್ತೆಯಲ್ಲಿ ಒಕ್ಕಲಿಗ ಸಮಾಜದ ಕುವೆಂಪು ಭವನ ಕಾಮಗಾರಿ ನನೆಗುದಿಗೆ ಬಿದ್ದಿದೆ. ನನ್ನ ಅವಧಿಯಲ್ಲಿ ಲಕ್ಷಾಂತರ ರೂ.ಗಳನ್ನು ಭವನಕ್ಕೆ ಕಲ್ಪಿಸಲಾಗಿದೆ. ಇನ್ನು ಹಣದ ಅವಶ್ಯಕತೆ ಇದೆ. ವೈಯಕ್ತಿಕ ಹಾಗು ಸಮಾಜದದವರು ಕೈಲಾದ ಸಹಾಯ ಮಾಡುತ್ತೇವೆ. ಈ ವಿಚಾರವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಗಮನಕ್ಕೂ ತರಲಾಗಿದೆಯೆಂದು ಹೇಳಿದರು.

ಯುಗ ಯೋಗಿ ಜಗದ್ಗುರು ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ತೋರಿದ ದಾರಿಯಲ್ಲಿ ನಾವೆಲ್ಲವೂ ಸಾಗಬೇಕಿದೆ. ಅಲ್ಲದೆ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಶ್ರೀ ಶಂಭುನಾಥ ಸ್ವಾಮೀಜಿ ಅವರು ಹಿರಿಯ ಸ್ವಾಮೀಜಿ ತೋರಿದ ದಾರಿಯಲ್ಲಿ ಇಡೀ ಸಮಾಜವನ್ನು ಭಕ್ತಿ ಮಾರ್ಗದಲ್ಲಿ ಕೊಂಡೊಯ್ಯುತ್ತಿರುವುದಕ್ಕೆ ಪ್ರತಿ ತಿಂಗಳು ನಡೆಯುವ ಗುರು ತೋರಿದ ದಾರಿ–ತಿಂಗಳ ಮಾಮನ ತೇರು ಕಾರ್ಯಕ್ರಮವೇ ಸಾಕ್ಷಿಯೆಂದರು.

ವಾಗಿ ಸುಧಾ ಬರಗೂರು ಅವರು ಬದುಕಿನ ಕಲೆ ವಿಷಯ ಕುರಿತು ಮಾತನಾಡಿ, ಇಂದಿನ ಮಕ್ಕಳ ಚಲನವಲನ ಅವಲೋಕಿಸಿದರೇ ಆತಂಕ

### ಮಕ್ಕಳ ಮೇಲೆ ಹೇರಿಕೆ ಬೇಡ

ಮಕ್ಕಳಿಗೆ ಕುಟುಂಬ ಎಂಬುವುದರ ಬಗ್ಗೆ ಕಿಂಚಿತ್ತು ಅರಿವು ಇಲ್ಲ. ಯಾಕೆಂದರೆ ಪೋಷಕರು ತಮ ಕನಸನ್ನು ಭವಿಷ್ಯದ ಮಕ್ಕಳ ಮೇಲೆ ಒತ್ತಾಯಪೂರ್ವಕವಾಗಿ ಹೇರುತ್ತಿದ್ದಾರೆ. ಪ್ರತಿ ಶಿಕ್ಷಣವನ್ನು ಉತ್ತಮ ರೀತಿಯಲ್ಲಿ ಪಡೆದುಕೊಳ್ಳುವ ಮೂಲಕ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ.ಕೇವಲ ಇಂಜಿನಿಯರಿಂಗ್, ಮೆಡಿಕಲ್ ಪದವಿಯಿಂದ ಅಲ್ಲ. ನಾವೆಲ್ಲರೂ ಶಿಕ್ಷಣವಂತರಾಗಿದ್ದೇವೆ ವಿನಃ ಪ್ರಜ್ಞಾವಂತರು, ವಿಚಾರವಂತರಾಗಿಲ್ಲ. ಅದರಿಂದ ಇಂದಿನ ಸಮಾಜದಲ್ಲಿ ಅಸಮಾನತೆ, ಅಂಧಕಾರ, ಮಾನವೀಯ ಮೌಲ್ಯಗಳು ದೂರವಾಗುತ್ತಿವೆ ಎಂದು ಅಭಿಪ್ರಾಯಪಟ್ಟರು.

ಮತ್ತು ಭಯವಾಗುತ್ತದೆ. ಅದಕ್ಕೆ ಇಂದಿನ ಶಿಕ್ಷಣ ಪದ್ಧತಿಯೋ, ಪೋಷಕರ ನಿರ್ಲಕ್ಷ್ಯತೆಯೋ ಹಾಗು ಸಮಾಜದ ದೃಷ್ಟಿಕೋನ ಕಾರಣವೇ ಎಂಬ ಪ್ರಶ್ನೆ ಕಾಡುತ್ತಿದೆ. ಮಕ್ಕಳೇ ಭವಿಷ್ಯದ ಪ್ರಜೆಗಳೆಂದು ಕರೆಯುವ ಸುದಂರ್ಭದಲ್ಲಿ ಪಾಠ ಹೇಳುವ ಮೇಷ್ಟ್ರು, ಮನೆಯ ಮೊದಲ ಗುರುಗಳಾದ ತಂದೆ ತಾಯಿ ಮಕ್ಕಳಿಗೆ ಸಮಾಜದ ಅಭ್ಯುದಯಕ್ಕೆ ಉತ್ತೇಜಿತವಾದ ಸಂಸ್ಕಾರ ಕಲಿಸಬೇಕು. ಕೇವಲ ಉದ್ಯೋಗ ಕಲ್ಪಿಸುವಂತಹ ಶಿಕ್ಷಣಕ್ಕಿಂತ ಬದುಕಿನ ಮೌಲ್ಯಗಳನ್ನು ನೀಡುವ ಶಿಕ್ಷಣ ಬೇಕಿದೆ. ಇದು ನಮ ಗುರು ಹಿರಿಯರು, ತಂದೆ ತಾಯಿಗಳಿಂದ ಮಾತ್ರ ಸಾಧ್ಯ. ಅದಕ್ಕೆ ಗುರ ತೋರಿದ ದಾರಿ–ತಿಂಗಳ ಮಾಮನ ತೇರು ಕಾರ್ಯಕ್ರಮ ಪೂರಕವೆಂದರು.

ಕಾಂಗ್ರೆಸ್ ಮುಖಂಡ ಶ್ರೀಧರ್‌ಗೌಡ, ಸ್ವಸ್ಥ ಸಮಾಜ ನಿರ್ಮಾಣ ವೇದಿಕೆ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ, ಬೆಮತ್ತಿ ಸುರೇಶ್, ರಶೀ, ಮೊಗಣ್ಣ, ಪ್ರಾಂಶುಪಾಲ ಮಹೇಶ್ ಇತರರಿದ್ದರು.

## ಪತ್ರಕರ್ತರ ಆರೋಗ್ಯ ಚಿಕಿತ್ಸೆ–ಸಂಘದ ಕ್ಷೇಮಾಭಿವೃದ್ಧಿಗೆ 20 ಲಕ್ಷ ರೂ.ಗೂ ಹೆಚ್ಚು, ಕ್ರೋಡೀಕರಣದ ಭರವಸೆ



ಭೀಮ ವಿಜಯ ನ್ಯೂಸ್

ಬೇಲೂರು : ಪತ್ರಕರ್ತರ ಆರೋಗ್ಯ ಚಿಕಿತ್ಸೆಗಾಗಿ ತಾಲೂಕು ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿಗೆ 20 ಲಕ್ಷಕ್ಕೂ ಹೆಚ್ಚು ಹಣವನ್ನು ಕ್ರೂಡೀಕರಿಸಿ ಕೊಡುವುದಾಗಿ ಶಾಸಕ ಸುರೇಶ್ ಹೇಳಿದರು.

ಪಟ್ಟಣದ ಬಸ್ ನಿಲ್ದಾಣ ಮುಂಭಾಗದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಮಾಧ್ಯಮ ದಿನಾಚರಣೆ ಅಂಗವಾಗಿ ಪತ್ರಿಕಾ ಮಿತ್ರರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದ ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಹೆಚ್.ಬಿ. ಮದನಗೌಡರು ಪತ್ರಕರ್ತರ ಆರೋಗ್ಯ ಹಾಗೂ ಚಿಕಿತ್ಸೆಗೆ ಶಾಸಕರು ಸ್ಪಂದಿಸಿ ಆರೋಗ್ಯ ನಿಗೆ ಸಹಾಯಧನ ನೀಡಬೇಕು ಎಂದು ಮನವಿ ಮಾಡಿದ್ದು ಹಗಲಿರುಳು ತಾಲೂಕಿನ ಅಭಿವೃದ್ಧಿಗೆ ಶ್ರಮಿಸುವ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ 20 ಲಕ್ಷಕ್ಕೂ ಹೆಚ್ಚು ಹಣವನ್ನು ತಮ್ಮ ಹಾಗೂ ಇತರ ಮೂಲಗಳಿಂದ ಸಂಗ್ರಹಿಸಿ ಕೊಡುವುದಾಗಿ ಹೇಳಿದರು.

ನಿವೇಶನ ರಹಿತ ಪತ್ರಕರ್ತರಿಗೆ ಆಶ್ರಯ ಯೋಜನೆಯಡಿ ನಿವೇಶನ ನೀಡಲು ತಾವು ಈಗಲೂ ಬದ್ಧರಾಗಿದ್ದೇವೆ. ಆದರೆ ಕೆಲ ಪ್ರಭಾವಿ ರಾಜಕಾರಣಿಗಳು ತಮ್ಮ ಸ್ವಾರ್ಥದಿಂದ ನಿವೇಶನ ನೀಡಲು ಅಡ್ಡಗಾಲು ಹಾಕಿದ್ದಾರೆ. ನಿವೇಶನ ಹಂಚಿಕೆ ವಿಚಾರದಲ್ಲಿ ಸೇಡಿನ ರಾಜಕೀಯ ಮಾಡಬಾರದು. ಇಂತಹ ಭೂಮಾಫಿಯಾ ಮಾಡುವರಿಗೆ ತಾವು ಅವಕಾಶ ನೀಡುವುದಿಲ್ಲ ಸ್ಪಷ್ಟಪಡಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಹೆಚ್.ಬಿ. ಮದನಗೌಡ ಮಾತನಾಡಿ, ಆಧುನಿಕ ಆಹಾರ ಪದ್ಧತಿ ಹಾಗೂ ಮಾನಸಿಕ ಒತ್ತಡದಿಂದ ಪತ್ರಕರ್ತರಲ್ಲಿ ಕಾಯಿಲೆಗಳು ಹೆಚ್ಚಾಗುತ್ತಿದೆ. ಪತ್ರಕರ್ತರ ಆರೋಗ್ಯ ಚಿಕಿತ್ಸೆಗಾಗೆ ನೆರವಾಗಲು ಕ್ಷೇಮಾಭಿವೃದ್ಧಿ ನಿಧಿಗೆ ಶಾಸಕರು 20 ಲಕ್ಷಕ್ಕೂ ಹೆಚ್ಚು ಹಣವನ್ನು ನೀಡಲು ಮುಂದಾಗಬೇಕು ಈಗಾಗಲೇ ಮಾಜಿ ಶಾಸಕರಾದ ಕೆ

ಎಸ್ ಲಿಂಗೇಶ್ ಅವರು 2 ಲಕ್ಷವನ್ನು ಕ್ಷೇಮಾಭಿವೃದ್ಧಿಗೆ ನೀಡಿದ್ದಾರೆ. ಅಂತೆಯೇ ಶಾಸಕರು ಇಲ್ಲಿನ ಜನಪ್ರತಿನಿಧಿಗಳು ತಮ್ಮ ಸಹಕಾರವನ್ನು ನೀಡಬೇಕು. ತಾಲೂಕು ಪತ್ರಕರ್ತರ ಸಂಘ ತನ್ನದೇ ಛಾಪುನ್ನು ರಾಜ್ಯದಲ್ಲಿ ಮೂಡಿಸಿದ್ದು ಮುಂದಿನ ದಿನಗಳಲ್ಲಿ ಸದೃಢ ಸಂಘ ಕಟ್ಟಲು ಪ್ರತಿಯೊಬ್ಬ ಪತ್ರಕರ್ತರು ಕ್ರಿಯಾಶೀಲತೆಯಿಂದ ಕೆಲಸ ಮಾಡಬೇಕು ಎಂದರು.

ಹೆಚ್ ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್ ಮಾತನಾಡಿ ಬೇಲೂರು ತಾಲೂಕು ಪತ್ರಕರ್ತರ ಸಂಘವು ಉತ್ತಮ ಸುದ್ದಿಗಳನ್ನು ಬಿತರಿಸುವ ಮೂಲಕ

ಜನಮನ್ನಣೆ ಗಳಿಸಿದೆ. ಪತ್ರಕರ್ತರ ಆರೋಗ್ಯ ನಿಧಿಗೆ ತಾವು 1 ಲಕ್ಷವನ್ನು ನೀಡುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೆ.ಎಸ್ ಲಿಂಗೇಶ್, ಪುರಸಭಾ ಅಧ್ಯಕ್ಷ ಉಷಾ ಸತೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಲ್.ರಾಜೇಗೌಡ, ಪತ್ರಕರ್ತರ ಸಂಘ ಅಧ್ಯಕ್ಷ ರಘುನಾಥ್, ತಹಸೀಲ್ದಾರ್ ಶ್ರೀಧರ ಕಂಕಣವಾಡಿ, ಎಸ್ ಪಿ ಶಿವಾನಂದ ಪಾಟೀಲ್, ಜಿಲ್ಲಾ ಉಪಾಧ್ಯಕ್ಷ ಡಿ.ಬಿ.ಮೋಹನ್ ಕುಮಾರ್, ಹೆಬ್ಬಾಳು ಹಾಲಪ್ಪ ಪ್ರಾಸ್ತಾವಿಕ ನುಡಿ, ಸ್ವಾಗತವನ್ನು ಪ್ರಧಾನ ಕಾರ್ಯದರ್ಶಿ ಬಿ.ಬಿ.ಶಿವರಾಜ್ , ಹಾಗೂ ನಿರೂಪಣೆಯನ್ನು ನಿರ್ದೇಶಕ ಮಲ್ಲೇಶ, ವಂದನಾರ್ಪಣೆಯನ್ನು ಖಜಾಂಚಿ ಎನ್.ಅನಂತು ನಡೆಸಿ ಕೊಟ್ಟರು. ಇದೇ ಸಂದರ್ಭದಲ್ಲಿ ಪತ್ರಕರ್ತರಾದ ರವಿಹೊಳ್ಳ, ದಿನೇಶ ಬೆಳ್ಳವಾರ, ಎಂ.ರಮೇಶ್, ಸುನಿ ಪಡುವಳಲು, ಬಿ.ಕೆ. ರಮೇಶ್, ಬಿ ಆರ್.ಮಹೇಶ್, ವಿತರಕರಾದ ಸಚ್ಚಿನ್ ಮತ್ತು ಪ್ರವೀಣಕುಮಾರ್ ಅವರನ್ನು ಸನ್ಮಾನಿಸಲಾಯಿತು.

## ಮಹಿಳಾ ಪತ್ರಕರ್ತೆ ಪ್ರಶ್ನೆಗೆ ಶಾಸಕ ಆರ್.ವಿ ದೇಶಪಾಂಡೆ ಅವಹೇಳನಕಾರಿ ಉತ್ತರ: ತೀವ್ರ ಖಂಡನೆ, ಕ್ಷಮೆಯಾಚಿಸುವಂತೆ ಆಗ್ರಹ



ಸಕಲೇಶಪುರ : ನಿನ್ನ ಹೆರಿಗೆಗೆ ಆಸ್ಪತ್ರೆ ಮಾಡಿಸೋಣ, ಚಿಂತಿಸಬೇಡ ಎಂದು ಮಹಿಳಾ ಪತ್ರಕರ್ತೆಯೊಬ್ಬರ ಪ್ರಶ್ನೆಗೆ ಉಡಾಫೆಯಿಂದ ಉತ್ತರ ಕೊಟ್ಟ ಶಾಸಕ ಆರ್ ವಿ ದೇಶಪಾಂಡೆ ವಿರುದ್ಧ ಹಾಸನ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೇಶಪಾಂಡೆಯವರ ಹೇಳಿಕೆಗೆ ವಿರೋಧ ಪಕ್ಷಗಳು ಮತ್ತು ಪತ್ರಕರ್ತರ ಸಂಘಗಳು ತೀವ್ರ ಟೀಕೆ ವ್ಯಕ್ತಪಡಿಸಿದ್ದು, ಕ್ಷಮೆಯಾಚಿಸುವಂತೆ ಆಗ್ರಹಿಸಿದ್ದಾರೆ.

ಮಾಧ್ಯಮದೊಂದಿಗೆ ಮಾತನಾಡಿ ದೇಶಪಾಂಡೆಯವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು ಉತ್ತರ ಕನ್ನಡ ಜಿಲ್ಲೆಯ ಆಸ್ಪತ್ರೆ ಸಮಸ್ಯೆ ಕುರಿತು ಪ್ರಶ್ನೆ ಕೇಳಿದ ಮಹಿಳಾ ಪತ್ರಕರ್ತೆಗೆ ನಿನ್ನ ಹೆರಿಗೆ ಬೇರೆ ಕಡೆ ಮಾಡಿಸುವುದಾಗಿ ಉಡಾಫೆಯ ಉತ್ತರವನ್ನು ಕಾಂಗ್ರೆಸ್‌ನ ಹಿರಿಯ ನಾಯಕ, ಶಾಸಕರಾದ ಆರ್. ವಿ. ದೇಶಪಾಂಡೆ ನೀಡಿದ್ದಾರೆ. ಶಾಸಕರ ಹೇಳಿಕೆಯಿಂದ ಕಾಂಗ್ರೆಸ್ ಪಕ್ಷದಲ್ಲಿ ಮಹಿಳೆಯರ ವಿಚಾರದಲ್ಲಿ ಕಾಂಗ್ರೆಸ್‌ನ ಮಹಿಳಾ ವಿರೋಧಿ ಧೋರಣೆ ವ್ಯಕ್ತವಾಗುತ್ತಿದೆ. ಸಮಸ್ಯೆ ಹೇಳಿಕೊಂಡು ಬರುವ ಮಹಿಳೆಯರ ದುಪಟ್ಟಾ ಎಳೆಯುವ ಮುಖ್ಯಮಂತ್ರಿ ಒಂದೆಡೆಯಾದರೆ, ಸಮಸ್ಯೆ ಕುರಿತು ಪ್ರಶ್ನಿಸುವ ಮಹಿಳಾ ಪತ್ರಕರ್ತರಿಗೆ ಉಡಾಫೆಯ ಉತ್ತರ ನೀಡುವ ಕೈ ಶಾಸಕರು ಮತ್ತೊಂದೆಡೆ. ರಾಜ್ಯದಲ್ಲಿ ಮೂಲಭೂತ ಅವಶ್ಯಕತೆಗಳನ್ನು ಕೇಳೋದು ತಪ್ಪಾ? ಅಸಭ್ಯವಾಗಿ ಉತ್ತರ ನೀಡಿದ ಕಾಂಗ್ರೆಸ್ ಶಾಸಕರು ಈ ಕೂಡಲೇ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಬ್ರಹ್ಮಶ್ರೀ ನಾರಾಯಣ ಗುರು ಆದರ್ಶ ಪಾಲಿಸಿ'– ಶಾಸಕ ಸಿಮೆಂಟ್ ಮಂಜು.




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸಮಾಜ ಸುಧಾರಣೆಗಾಗಿ ಹೋರಾಟ ಮಾಡಿದ್ದ ನಾರಾಯಣ ಗುರುಗಳ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಡೆದ ಬ್ರಹ್ಮಶ್ರೀ ನಾರಾಯಣ ಗುರುಗಳ 171ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವ ಪೀಳಿಗೆಗೆ ನಾರಾಯಣ ಗುರುಗಳ ಮಾರ್ಗದರ್ಶನ ಅತ್ಯಗತ್ಯ. ಅವರ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಯಶಸ್ವಿ ಆಗಬೇಕು.ಜಾತಿ, ಧರ್ಮ, ವರ್ಣ ಬೇಧವಿಲ್ಲದೆ ಎಲ್ಲರೂ ಸಮಾನರೆಂದು ಬೋಧಿಸಿದ ನಾರಾಯಣ ಗುರು ಅವರ ತತ್ವಗಳು ಇಂದಿಗೂ ಸಮಾನ ಪ್ರಸ್ತುತತೆಯನ್ನು ಹೊಂದಿವೆ. ಸಮಾಜದಲ್ಲಿ ಸಮಾನತೆ, ಶಿಕ್ಷಣ ಮತ್ತು ಸ್ವಾಭಿಮಾನ ಬೆಳೆಸುವ ಕೆಲಸದಲ್ಲಿ ಅವರು ಮಾಡಿದ ಶ್ರಮ ನಮಗೆ ದಾರಿದೀಪವಾಗಿದೆ" ಎಂದು ಹೇಳಿದರು. ಸಾರ್ವತ್ರಿಕ ರಜೆ ನೀಡುತ್ತಿದ್ದು ಅದರಂತೆ ನಾರಾಯಣಗುರು ರವರ ಜಯಂತಿ ದಿನದಂದು ರಜೆ ನೀಡಬೇಕೆಂದು ಬೇಡಿಕೆ ಸಲ್ಲಿಸಿದ್ದು ಈ ಕುರಿತಂತೆ ಮುಂದಿನ ವಿಧಾನಸಭಾ ಅಧಿವೇಶನ ದಲ್ಲಿ ಈ ವಿಚಾರವಾಗಿ ಪ್ರಸ್ತಾಪಿಸುತ್ತೇನೆ ಅದೇ ರೀತಿ ತಾಲೂಕಿನಲ್ಲಿ ಬಿಲ್ಲವ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾಗುವುದಾಗಿ ಭರವಸೆ ನೀಡಿದರು.


ನಾರಾಯಣ ಗುರು ಜಯಂತಿ ಕಾರ್ಯಕ್ರಮಕ್ಕೆ ತಾಲೂಕು ಆಡಳಿತದ ಅಧಿಕಾರಿಗಳು ಗೈರುಹಾಜರಾಗಿದ್ದರಿಂದ ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.ತಹಸೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳು ಹಾಜರಾಗದ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಮಹತ್ವಕ್ಕೆ ಧಕ್ಕೆಯಾಗಿದೆ ಎಂದು ಆರೋಪಿಸಿದ ಮುಖಂಡರು, "ಅಧಿಕಾರಿಗಳು ಗೌರವಾನ್ವಿತ ಕಾರ್ಯಕ್ರಮಗಳಿಗೆ ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ಇದು ಸಮುದಾಯದ ಭಾವನೆಗಳಿಗೆ ನೋವುಂಟು ಮಾಡುತ್ತಿದೆ"ಎಂದು ಕಿಡಿಕಾರಿದರು.

ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಕರವೇ ತಾಲೂಕು ಅಧ್ಯಕ್ಷ ರಮೇಶ್ ಪೂಜಾರಿ ಆಗ್ರಹಿಸಿದರು.

ಸಮುದಾಯ ತಾಲೂಕು ಅಧ್ಯಕ್ಷ ಭಾಸ್ಕರ್ ಮಾತನಾಡಿ, ನಾರಾಯಣ ಗುರುರವರು ಒಂದು ಸಮುದಾಯಕ್ಕೆ ಸೇರಿದ ವ್ಯಕ್ತಿಯಲ್ಲ ಸಮಾಜದಲ್ಲಿರುವ ಅಸ್ಪೃಶ್ಯತೆ ವಿರುದ್ಧ ಹೋರಾಡಿದವರು. ವಿಧಾನಸಭಾ ಕ್ಷೇತ್ರಗಳಲ್ಲಿ ನಾರಾಯಣ ಗುರುಗಳ ಪುತ್ತಳಿ ನಿರ್ಮಾಣವಾಗಿದ್ದು ತಾಲೂಕಿನಲ್ಲಿಯೂ ನಾರಾಯಣ ಗುರುಗಳ ಪುತ್ತಳಿ ನಿರ್ಮಾಣ ಕಾರ್ಯಕ್ಕೆ ಶಾಸಕರು ಮುಂದಾಗಬೇಕೆಂದು ಮನವಿ ಮಾಡಿದರು.

ಈ ವೇಳೆ ಕುನಿಗನಹಳ್ಳಿ ಗ್ರಾ.ಪಂ ಅಧ್ಯಕ್ಷ ಪ್ರಕಾಶ್, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಗೋಪಿನಾಥ್, ಕರವೇ ತಾಲೂಕು ಅಧ್ಯಕ್ಷ ರಮೇಶ್ ಪೂಜಾರಿ ಯವರನ್ನು ಸನ್ಮಾನಿಸಲಾಯಿತು.

ಉಪ ತಹಸೀಲ್ದಾರ್ ಮೋಹನ್, ತಾಲೂಕು ಚುನಾವಣಾ ಶಿರಸ್ತೆದಾರ್ ಶ್ವೇತ, ತಾಲೂಕು ಪಶು ವೈದ್ಯಾಧಿಕಾರಿ ವೆಂಕಟೇಶ್,ಸಮುದಾಯದ ಮುಖಂಡರಾದ ಉಮಾನಾಥ್ ಸುವರ್ಣ ಇತರರಿದ್ದರು.




ಹಾಸನ: ತಾಲ್ಲೂಕಿನ ಕೆಂಚಟ್ಟಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ರೋಟರಿ ಸಂಸ್ಥೆಯಿಂದ ಮಕ್ಕಳಿಗೆ ನಲಿ–ಕಲಿ ಟೇಬಲ್, ಕುರ್ಚಿಗಳನ್ನು ಕೊಡುಗೆಯಾಗಿ ನೀಡಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಕೆ. ರಂಗನಾಥ, ರೋಟರಿ ಅಧ್ಯಕ್ಷ ಮಹೇಶ್, ಕ್ಲಸ್ಟರ್ ಸಂಪನೂಲ ವ್ಯಕ್ತಿ ಹೇಮಲತಾ, ತಾಲ್ಲೂಕು ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಡಿ. ರಮೇಶ್, ರೋಟರಿ ಪದಾಧಿಕಾರಿಗಳು ಹಾಗು ಗ್ರಾಮಸ್ಥರು ಹಾಜರಿದ್ದರು.



ಹಾಸನ: ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಖರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ದಸರ ಕ್ರೀಡಾಕೂಟವನ್ನು ಮಹಾನಗರ ಪಾಲಿಕೆ ಮೇಯರ್ ಹೇಮಾಲತ ಕಮಲ್ ಕುಮಾರ್ ಉದ್ಘಾಟಿಸಿದರು.

## ಇದ್ದರೆ ನೆಮ್ಮದಿಯಾಗಿರಬೇಕು



ಚೇತನ್ ಗುರೂಜಿ, ಬಸವ ಯೋಗ ಕೇಂದ್ರ ಅಡಗೂರು


ಈ ಜಗತ್ತಿನಲ್ಲಿ ನೆಮ್ಮದಿಯಾಗಿರುವವರು ಎರಡು ಜನರು ಮಾತ್ರ. ಪ್ರಪಂಚದ ಅರಿವಿಲ್ಲದೆ ಇರುವಂತಹ ಮಕ್ಕಳು, ಇನ್ನೊಬ್ಬರು ಸಮಾಜದ ಪರಿಜ್ಞಾನವೇ ಇಲ್ಲದಿರುವ ಹುಚ್ಚರು (ಮಾನಸಿಕ ಅಸ್ವಸ್ಥರು) ಮಾತ್ರ. ಹಾಗಾದರೆ ಯಾರು ನೆಮ್ಮದಿಯಾಗಿರುವುದು ಎಂದರೆ ನಿದ್ರೆಯಲ್ಲಿರುವ ಮತ್ತು ಯೋಗ ಸಾಧನೆಯಲ್ಲಿ ಇದ್ದು ಸಮಾಧಿ ಸ್ಥಿತಿ ತಲುಪಿದಂತವರು ಮಾತ್ರವೇ ಈ ಜಗತ್ತಿನಲ್ಲಿ ನೆಮ್ಮದಿಯಿಂದ ಇರುವುದಕ್ಕೆ ಸಾಧ್ಯವಿದೆ. ಬರೀ ನಿದ್ದೆಯಲ್ಲೇ ಇರುವುದಕ್ಕೂ ಆಗುವುದಿಲ್ಲ ಇನ್ನೂ ಯೋಗ ಮಾರ್ಗದ ದಾರಿಯಲ್ಲಿ ಹೆಜ್ಜೆನ್ನೇ ಇಟ್ಟಿಲ್ಲ, ಇನ್ನೂ ಸಮಾಧಿ ಸ್ಥಿತಿ ತಲುಪುವುದು ಸಾಧ್ಯವೇ.

ಆ ದಾರಿಯಲ್ಲಿ ನಡೆಯಲು ನಮ್ಮೊಳಗೆ ಇರುವ ಅರಿಷ್ಣರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವುಗಳೇ ತೊಂದರೆ ಕೊಡುತ್ತಿರುವುದರಿಂದ ಸ್ವಲ್ಪ ಸಮಯ ನೆಮ್ಮದಿ ಸಿಗುವುದು ನಿದ್ರೆಯಲ್ಲಿದ್ದಾಗ ಮಾತ್ರ. ಎಚ್ಚರದಲ್ಲಿ ಇರುವಂತಹರು ಯಾರೇ ಆಗಿರಲಿ ಅವರನ್ನು ಮೇಲಿನ ಒಂದಲ್ಲ ಒಂದು ಬಂಧನಗಳಿಂದ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿರುತ್ತೇವೆ ಹೊರಬರುವ ದಾರಿಯನ್ನು ಕಂಡುಕೊಳ್ಳುವ ಮನಸ್ಸನ್ನು ಮಾಡಿದರೆ ಮಾತ್ರವೇ ಈ ಭೂಮಿಯ ಮೇಲೆ ಇರುವಷ್ಟು ದಿನಗಳ ಕಾಲ ಸಂತೋಷದಿಂದಿರಲು ಸಾಧ್ಯವಾಗುತ್ತದೆ ಅರ್ಥಾತ್ ಆರೋಗ್ಯವಂತನಾಗಿ ಜೀವಿಸಲು ಅನುಕೂಲವಾಗುತ್ತದೆಂಬುದು ಬೇಗ ನಾವು ತಿಳಿದುಕೊಳ್ಳಬೇಕು ಇಲ್ಲವಾದರೆ ನಮ್ಮ ಬದುಕನ್ನು ಬರೀ ಆಸೆ ಆಕಾಂಕ್ಷೆ ಈಡೇರಿಕೆಗೋಸ್ಕರನೇ ಜೀವಿತಾವಧಿಯನ್ನು ಮುಗಿಸುತ್ತೇವೆ ಇದನ್ನೇ ನಾವುಗಳು ನೆಮ್ಮದಿ ಎಂದು ಭಾವಿಸಿ ಸುಮ್ಮನಾಗಿ ಬಿಡುತ್ತೇವೆ. ಖಂಡಿತ ಹಾಗಲ್ಲ ಇತ್ತೀಚಿಗಂತೂ ಬಹಳಷ್ಟು ಜನರು ದೇವರ ಹತ್ತಿರ ಪ್ರಾರ್ಥಿಸುವಂತದ್ದು ಆರೋಗ್ಯ ಆರೋಗ್ಯವಂದನ್ನು ಕೊಡುಯೆಂದು ಕೇಳುವವರೇ ಜಾಸ್ತಿ. ಅಂದರೆ ಆರೋಗ್ಯವಿದ್ದರೇನೇ ನೆಮ್ಮದಿ ಎಂಬ ಭಾವನೆ ಮೂಡಿರುವುದು. ಹಾಗಾದರೆ ಎಲ್ಲವೂ ಇದ್ದು ಆರೋಗ್ಯವಿಲ್ಲದಿದ್ದರೆ ಏನಿದ್ದರೂ ಪ್ರಯೋಜನವಿಲ್ಲ ಎಂಬ ಅರಿವು ನಮಗೆ ಬರಬೇಕು ಕಾರಣ. ಇವತ್ತಿನ ದಿನಮಾನದಲ್ಲಿ ಎಲ್ಲರೂ ಹುಡುಕುತ್ತಿರುವುದು ನೆಮ್ಮದಿ ಅರ್ಥಾತ್ ಆರೋಗ್ಯದಿಂದ ಇರುವುದಕ್ಕೆ ಓಡುತ್ತಿರುವವರೇ ಹೆಚ್ಚಾಗಿದ್ದಾರೆ ಎಂಬುದು ನಮಗೆ ಬೇಗ ತಿಳುವಳಿಕೆಗೆ ಬಂದರೆ ಒಳ್ಳೆಯದು. ಎಲ್ಲರೂ ಒಂದಲ್ಲ ಒಂದು ಚಿಂತೆಯಲ್ಲೇ ಮುಳುಗಿ ತಮ್ಮ ಅಮೂಲ್ಯ ಜೀವನವನ್ನು ಮುಗಿಸುತಿದ್ದೇವೆನೋ, ಅಂಬಿಗರ ಚೌಡಯ್ಯನವರು 12ನೇ ಶತಮಾನದಲ್ಲಿ ನಮ್ಮನ್ನು ಎಚ್ಚರಿಸುವ ಪ್ರಯತ್ನವನ್ನು ವಚನದಲ್ಲಿ ತಿಳಿಸಿದ್ದಾರೆ

ಬಡತನಕ್ಕೆ ಉಂಬುವ ಚಿಂತೆ ಉಣಲಾದರೆ ಉಡುವ ಚಿಂತೆ ಉಡಲಾದರೆ ಇಡುವ ಚಿಂತೆ ಇಡಲಾದರೆ ಹೆಂಡಿರ ಚಿಂತೆ ಹೆಂಡಿರಾದರೆ ಮಕ್ಕಳ ಚಿಂತೆ ಮಕ್ಕಳಾದರೆ ಬದುಕಿನ ಚಿಂತೆ ಬದುಕಾದರೆ ಕೇಡಿನ ಚಿಂತೆ ಕೆಡದಿರೆ ಮರಣದ ಚಿಂತೆ

ಇಂತೀ ಹಲವು ಚಿಂತೆಯಲ್ಲಿ ಇದ್ದವರನ್ನು ಕಂಡೆ ನಿಮ್ಮ ಚಿಂತೆಯಲ್ಲಿ ಇದ್ದವರನ್ನು ಯಾರನ್ನು ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣ

ಹೀಗೆ ಅನೇಕ ಚಿಂತೆಗಳನ್ನು ಮಾಡುತ್ತಾ ನೆಮ್ಮದಿಯನ್ನು ಸ್ವತಹ ಕೈಯಾರೆ ಕೆಡಿಸಿಕೊಳ್ಳುವವರ ಸಂಖ್ಯೆ 21ನೆಯ ಶತಮಾನದಲ್ಲಂತೂ ಬಹಳ ಹೆಚ್ಚಾಗಿದೆ ಈ ಪ್ರಕೃತಿಗೆ ಮನುಷ್ಯನ ಹೊಟ್ಟೆ ತುಂಬಿಸುವ ಶಕ್ತಿ ಇದೆ, ಆದರೆ ಅವನ ಆಸೆ ತುಂಬಿಸುವಷ್ಟು ಶಕ್ತಿ ಅವನಿಗಿಲ್ಲ ಅರಿತುಕೊಂಡು ಬಾಳಿದವನೇ ಬುದ್ಧಿವಂತ ಅರಿತು, ಮರೆತು ಬದುಕುವವನೇ ಜಾಣ ಜಾಣನೆನಬಹುದು. ಅದರಲ್ಲೂ ಒಂದಿಷ್ಟು ನೆಮ್ಮದಿಯನ್ನು ಕಾಣಲು ಮೆಟ್ಟಿಲಾಗಿ ನಮಗೆ ಯೋಗ ಪ್ರಾಣಾಯಾಮ ಧ್ಯಾನ ಸಹಕಾರವನ್ನು ಕೊಡುವುದರ ಮೂಲಕ ಒಂದಿಷ್ಟು ಸಜ್ಜನರ ಸಂಘ ನಮಗೆ ಶಾಂತಿ ಸಮಾಧಾನವನ್ನು ಕೊಡುತ್ತದೆಂಬುದನ್ನು ಕಂಡುಕೊಂಡರಷ್ಟೇ ಮುಂದಿನ ದಿನದಲ್ಲಿ ಈ ಮಾನವ ಜನಾಂಗ ಉಳಿಲಿಕ್ಕೆ ಸಾಧ್ಯವಾಗುವುದು ಇಲ್ಲವಾದರೆ ನಮ್ಮ ನಾಶವನ್ನೇ ನಾವೇ ಕೈಯಾರೆ ಮಾಡಿಕೊಳ್ಳುವ ಕಾಲ ಬಹಳ ಬೇಗ ಬರುವ ವಾತಾವರಣವನ್ನು ಕಟ್ಟಿಕೊಳ್ಳುವ ದಾರಿಯಲ್ಲೇ ಮುನ್ನಡೆಯುತ್ತಿದ್ದೇವೆ ಅನ್ನಿಸುತ್ತಿದೆ ಅಂದರೆ ಟಿವಿ ಮೊಬೈಲ್ ಕಂಪ್ಯೂಟರ್ ನೋಡುವುದರಲ್ಲಿಯೇ ಅಲ್ಪ ತೃಪ್ತಿ ಅನುಭವಿಸಿ ಮಾನಸಿಕ



ತೊಳಲಾಟದಿಂದ ಬಳಲಿ ಬಹಳ ಚಿಕ್ಕ ವಯಸ್ಸಿನಲ್ಲೇ ಆತ್ಮಹತ್ಯೆಯ ದಾರಿ ಹಿಡಿದು ಸಾಗುತ್ತಿರುವ ಇಂದಿನ ಜನಾಂಗಕ್ಕೆ ಒಂದಿಷ್ಟು ನೆಮ್ಮದಿ ಕೊಡುವಂತದ್ದು ಇಂತಹ ಲೇಖನಗಳನ್ನು ಓದುವುದು ಜೊತೆಗೆ ಸತ್ಸಂಗದಲ್ಲಿ ಭಾಗವಹಿಸುವ ಮನೋಭಾವನೆಯನ್ನು ಬಿತ್ತುವುದರ ಮೂಲಕ ಆರೋಗ್ಯವಂತರಾಗಿ ಮತ್ತು ಸತ್ ಪ್ರಜೆಗಳಾಗಿ ಪರಮಾತ್ಮ ಕೊಟ್ಟಿರುವ ಆಯಸ್ಸನ್ನು ಸದ್ಬಳಕೆ ಮಾಡಿಕೊಳ್ಳುವಲ್ಲೋ ಉತ್ತಮ ಅವಕಾಶವಾಗುತ್ತದೆ.


ಜೇಡರ ದಾಸಿಮಯ್ಯನವರ ಒಂದು ವಚನದಲ್ಲಿ ಹೀಗೆ ತಿಳಿಸಿದ್ದಾರೆ.

ಕರಿಯನಿತ್ತಡೆವಲ್ಲೇ, ಸಿರಿಯನಿತ್ತಡೆವಲ್ಲೇ,

ಹಿರಿದಪ್ಪ ರಾಜ್ಯವನಿತ್ತಡೆವಲ್ಲೇ ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆಯಿತ್ತಡೆ ನಿಮ್ಮ ನಿತ್ಯ ಕಾಣ ರಾಮನಾಥ

ಒಳ್ಳೆಯವರ ಸಹವಾಸ ಇದ್ದರೆ ಸಿರಿ ಸಂಪತ್ತು ಐಶ್ವರ್ಯವಿದ್ದಂತೆ ಎಂಬುದನ್ನು ಅರ್ಥೈಸಿಕೊಂಡು ನಾವು ಸಹ ಬದಲಾವಣೆ ಮಾಡಿಕೊಂಡರೆ ಖಂಡಿತ ನಿಮ್ಮದಿಯಾಗಿರಬಹುದೇನೋ, ನೀವೇ ಯೋಚಿಸಿ.

## ಗುಂಡಿಮಯ ಅಗನಿ ರಸ್ತೆ ದುರಸ್ತಿಗೆ ಆಗ್ರಹ



ಸಕಲೇಶಪುರ: ತಾಲ್ಲೂಕಿನ ಹಾನುಬಾಳು ಹೋಬಳಿಯ ಪ್ರಮುಖ ಪ್ರವಾಸಿ ತಾಣ ಅಗನಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ಶೀಘ್ರ ದುರಸ್ತಿ ಮಾಡಬೇಕೆಂದು ಲೇಖಕ ಅವರೇಕಾಡು ಪೃಥ್ವಿ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಹಾನುಬಾಳು ದೇವಾಲದಕೆರೆ ಮುಖ್ಯ ರಸ್ತೆಯಿಂದ ಆಗನಿ ಗ್ರಾಮಕ್ಕೆ ಹೋಗುವ ರಸ್ತೆ ದುಸ್ಥಿತಿ ತಲುಪಿದೆ. ಪ್ರವಾಸಿಗರು ಹಾಗು ಸ್ಥಳೀಯರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಪಶ್ಚಿಮ ಘಟ್ಟದ ಸುಂದರ ಗುಡ್ಡಗಾಡು ಪ್ರದೇಶದಲ್ಲಿರುವ ಈ ಗ್ರಾಮ ಪ್ರವಾಸೋದ್ಯಮದಲ್ಲಿ ಪ್ರಮುಖ ಸ್ಥಾನ ಪಡೆದಿದ್ದು, ರಜೆ ದಿನಗಳಲ್ಲಿ ನೂರಾರು ಪ್ರವಾಸಿಗರು ಭೇಟಿ ನೀಡುವ ತಾಣವಾಗಿದೆ ಎಂದು ತಿಳಿಸಿದ್ದಾರೆ.

ಈ ಭಾಗದಲ್ಲಿ 8ಕ್ಕೂ ಹೆಚ್ಚು ರೆಸಾರ್ಟ್, 20ಕ್ಕೂ ಹೆಚ್ಚು ಹೋಂ ಸ್ಟೇ ಕಾರ್ಯನಿರ್ವಹಿಸುತ್ತಿವೆ. ಪ್ರವಾಸೋದ್ಯಮದಿಂದ ಸ್ಥಳೀಯ ಆರ್ಥಿಕತೆಯ ಬೆಳವಣಿಗೆಗೆ ಮಹತ್ತರ ಕೊಡುಗೆ ದೊರೆತಿದ್ದು, ಅನೇಕ ಉದ್ಯೋಗಾವಕಾಶಗಳೂ ನಿರ್ಮಾಣವಾಗಿವೆ. ರೆಸಾರ್ಟ್ ಮತ್ತು ಹೋಂ ಸ್ಟೇ ಮಾಲೀಕರು ಲಕ್ಷಾಂತರ ರೂಪಾಯಿ ತೆರಿಗೆ ಮತ್ತು ಪಾವತಿಸಿ ರಾಜ್ಯ ಮತ್ತು ದೇಶದ ಬೊಕ್ಕಸಕ್ಕೆ ಆದಾಯ ನೀಡುತ್ತಿದ್ದಾರೆ. ಆದರೂ ಪ್ರವಾಸಿಗರು ಹಾಗು ಸ್ಥಳೀಯರ ಕನಿಷ್ಟ ಬೇಡಿಕೆ ಈಡೇರಿಸುತ್ತಿಲ್ಲ ಎಂದು ಅವರು ಬೇಸರ ಹೊರ ಹಾಕಿದ್ದಾರೆ.

ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ವೆಟ್ ಮಿಕ್ಸ್ ಹಾಕಿ ತಾತ್ಕಾಲಿಕ ಸೌಲಭ್ಯ ಒದಗಿಸಬೇಕು. ಜೊತೆಗೆ ಮುಂದಿನ ದಿನಗಳಲ್ಲಿ ಗುಣಮಟ್ಟದ ರಸ್ತೆ ನಿರ್ಮಿಸಲು ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248